ಇ) ಭಾರತೀಯ ರಿಸರ್ವ ಬ್ಯಾಂಕಿನ ಮಾಹಿತಿಯ ಪ್ರಕಾರ ರಾಜ್ಯದಲ್ಲಿ 31-3-94ರ ಅಂತ್ಯಕ್ಕೆ ಒಟ್ಟು 13,950 ರೋಗಗ್ರಸ್ಥ ಕೈಗಾರಿಕೆಗಳು ಹಾಗೂ 4,328 ಸ್ಥಗಿತಗೊಂಡ ಕೈಗಾರಿಕೆಗಳು ಇವೆ.

ಈ) ರೋಗಗ್ರಸ್ಥ ಘಟಕಗಳ ಹಾಗೂ ಸ್ಥಗಿತಗೊಂಡಿರುವ ಘಟಕಗಳ ಪುನಃಶ್ಚೇತನಕ್ಕೆ ಈಗಾಗಲೇ ಸಮಿತಿಯೊಂದಿದ್ದು, ಇದು 1988 ರಿಂದ ಕಾರ್ಯನಿರ್ವಹಿಸುತ್ತಿದೆ. ಈ ಸಮಿತಿ ಇತ್ತೀಚಿನ ವರದಿಯಂತೆ 317 ಘಟಕಗಳಿಗೆ ಬೀಜಧನ ಸಾಲದ ಮಂಜೂರಾತಿ ನೀಡಿದೆ. ಉತ್ತೇಜಕರ ಶೇಕಡ 50ರ ಪಾಲಿಗೆ ಎದುರಿಗೆ ಬೀಜ ಧನ ಸಾಲದ ಮೊತ್ತ ರೂ. 50.00 (ಐವತ್ತು ಸಾವಿರ) ಕ್ಕೆ ಮೀರದಂತೆ ನೀಡಲಾಗುವುದು.

ಕುಣಿಗಲ್‌ನಲ್ಲಿ ರೇಷ್ಮೆ ಮಾದರಿ ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆ

151 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಬಿತ್ತನೆ ವಲಯದಲ್ಲಿರುವ ಒಟ್ಟು ಮಾದರಿ ಚಾಕಿ ಸಾಕಾಣಿಕಾ ಕೇಂದ್ರಗಳೆಷ್ಟು?*

ಆ) *ಕುಣುಗಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೇಂದ್ರಗಳೆಷ್ಟು?*

ಇ) *ಸದರಿ ಕ್ಷೇತ್ರದಲ್ಲಿ ಈಗ ಪ್ರಾರಂಭಿಸಬೇಕೆಂದಿರುವ ಅಂತಹ ಕೇಂದ್ರಗಳೆಷ್ಟು? ಮತ್ತು ಎಲ್ಲೆಲ್ಲಿ ಹಾಗೂ ಈ ವಿಷಯವು ಯಾವ ಹಂತದಲ್ಲಿದೆ.*

ಈ) *ಈ ಬಗ್ಗೆ ಸರ್ಕಾರದ ಕ್ರಮವೇನು?*

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) 20 ವಿವರಗಳುಳ್ಳ ಪಟ್ಟಿಯನ್ನು ಲಗತ್ತಿಸಿದೆ.

ಈ) ಎಲ್ಲಾ ಕಾಮಗಾರಿಗಳು ಪೂರ್ಣಗೊಂಡ ನಂತರ ಕೆಲಸವನ್ನು ಪ್ರಾರಂಭಿಸಲಾಗುತ್ತದೆ.

ಕೈಗಾರಿಕೆ ಪ್ರದೇಶದಲ್ಲಿ ನೀರಿನ ಕೊರತೆ

153 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೈಗಾರಿಕಾ ಉದ್ದೇಶಕ್ಕೆ ಆಗತ್ಯವಿರುವ ನೀರಿನ ಪ್ರಮಾಣವೆಷ್ಟು ಕೈಗಾರೀಕೀಕರಣದಿಂದ ಹೆಚ್ಚುವ ಕಾರ್ಮಿಕರ ಸಂಖ್ಯೆ ಎಷ್ಟು? (1) ಈ ಪ್ರದೇಶಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡುತ್ತಿದೆ.*